O.S. NO. 80/2019
PW - 1.
Dated 07-02-2025

ಸಾಕ್ಷಿಯನ್ನು ಈ ದಿನ ದಿನಾಂಕ 07-02-2025 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು .

ಮುಂದುವರೆದ ಪಾಟಿ ಸವಾಲುಃ ಪ್ರತಿವಾದಿ ಪರವಾಗಿ ಶ್ರೀ ಎಸ ಎಸ್ ಎ ವಕೀಲರಿಂದಃ

ದೊಡ್ಡಪಕ್ಕೀರಪ್ಪ ರವರ ತಂದೆ ಹೆಸರು ಗಂಗಪ್ಪ. ದಾವಾ ಆಸ್ತಿಗಳು ಗಂಗಪ್ಪನಿಂದ ದೊಡ್ಡಪಕ್ಕೀರಪ್ಪ ರವರಿಗೆ ಬಂದಿರುತ್ತವೆ ಎಂದು ತೊರಿಸಲು ಯಾವುದೇ ದಾಖಲೆ ಹಾಜರು ಮಾಡಿರುವುದಿಲ್ಲ ಎಂದರೆ ಸಾಕ್ಷಿ ಪಿತ್ರಾರ್ಜಿತ ಆಸ್ತಿಗಳು ಇರುತ್ತವೆ ಎಂದು ನುಡಿದಿರುತ್ತಾರೆ. ನಾನು ಪ್ರಶ್ನಿಸುತ್ತಿರುವ ವಾಟ್ನಿ ಪತ್ರ 2009 ರಲ್ಲಿ ಆದ ನೊಂದಾಯಿತ ವಾಟ್ನಿ ಪತ್ರ ಎಂದರೆ ಸರಿ. ನನ್ನ ತಂದೆ ದೊಡ್ಡಪಕ್ಕೀರಪ್ಪ 2012 ರಲ್ಲಿ ಮೃತ ಪಟ್ಟಿರುತ್ತಾರೆ ಎಂದರೆ ಸರಿ. ನಿಪಿ - 1 ವಾಟ್ನಿ ಪತ್ರ ಪ್ರಕಾರ ಹಿಸ್ಸಾ ದಾರರ ಹೆಸರು ಪ್ರತ್ಯೇಕ ದಾಖಲಾಗಿರುತ್ತವೆ ಎಂದರೆ ಸರಿಯಲ್ಲ. ನಾನು ಹಾಜರು ಪಡಿಸಿದ ದಾಖಲೆಗಳನ್ನು ನೊಡಿರುತ್ತೇನೆ, ಆದರೆ ನನಗೆ ಅವುಗಳನ್ನು ಓದಲು ಬರುವುದಿಲ್ಲ. ಅವುಗಳನ್ನು ನಾನು ಓದಿಸಿ ತಿಳಿದುಕೊಂಡಿರುವುದಿಲ್ಲ. ವಾದ ಪತ್ರ ತಯಾರಿಸಲು ವಕೀಲರಿಗೆ ಮಾಹಿತಿ ನಾವೇ ಕೊಟ್ಟಿರುತ್ತೇವೆ. ನಾನು ಹಾಜರುಪಡಿಸಿ ದಾಖಲಾತಿಗಳ ಪ್ರಕಾರ 2009 ರ ವಾಟ್ನಿ ಪ್ರಕಾರ ನನ್ನ ತಂದೆ ಮತ್ತು ಆತನ ಸಹೊದರರ ಹೆಸರು ಆಸ್ತಿ ಉತಾರದಲ್ಲ ದಾಖಲಾದವು ಎಂದರೆ ಸರಿ. ಸದರಿ ದಾಖಲಾತಿಗಳನ್ನು ಪ್ರಶ್ನಿಸಿ ನನ್ನ ತಂದೆ ತನ್ನ ಜೀವಿತ ಅವದಿಯಲ್ಲ್ ಪ್ರಶ್ನಿಸಿ ಮಾಡಿಲ್ಲ ಎಂದರೆ ಸಾಕ್ಷಿ ಅವರಿಗೆ ಮಾತನಾಡಲು ಸರಿಯಾಗಿ ಬರುತ್ತಿರಲಿಲಲ ಎಂದು ನುಡಿದಿರುತ್ತಾರೆ. ನನ್ನ ತಂದೆಗೆ

ಸರಿಯಾಗಿ ಮಾತನಾಡಲು ಬರುತ್ತಿರಲಿಲ್ಲ ಎಂದು ವಾದ ಪತ್ರದಲ್ಲಿ ಹೇಳಿ ಬರೆಸಿಲ್ಲ. ಹೀಗಾಗಿ ನಾನು ನನ್ನ ತಂದೆಗೆ ಮಾತನಾಡಲು ಬರುತ್ತಿರಲಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆ ತನ್ನ ಜೀವಿತ ಅವದಿಯಲ್ಲಿ ಮನೆತನದ ಹಿರಿತನ ಮಾಡುತ್ತಿದ್ದರು ಎಂದರೆ ಸರಿ. ನನ್ನ ತಂದೆ ಕುಟುಂಬದ ಕರ್ತಾ ನಾಗಿ ದಾವಾ ಆಸ್ತಿಗಳು ತನ್ನ ಸ್ವಯಾರ್ಜಿತ ಆಸ್ತಿಗಳು ಇರುವುದರಿಂದ ತಾನೇ ಸ್ವತ ವಾಟ್ನಿ ಪ್ರಕಾರ ತನ್ನ ಗಂಡು ಮಕ್ಕಳಿಗೆ ಬಿಟ್ಟು ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸದರಿ ವಾಟ್ನಿ ಪತ್ರದ ಪ್ರಕಾರ ಹೆಸರು ಹಚ್ಚಿಕೊಳ್ಳಲು ಕಬೂಲಿ ಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ಸದರಿ ವಾಟ್ನಿ ಪತ್ರದ ಪ್ರಕಾರ ನಾವು ಮತ್ತು ನನ್ನ ಸಹೋದರರರು ಮತ್ತು ನನ್ನ ತಂದೆಯವರು ನಡೆದುಕೊಂಡಿರುತ್ತೇವೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳನ್ನು ನನ್ನ ತಂದೆಯ ಸ್ವಯಾರ್ಜಿತ ಆಸ್ತಿಗಳು ಅಂತಾ ಅವುಗಳನ್ನು ನೊಡುತ್ತಿದ್ದೇವು ಹೊರತಾಗಿ ಜಂಟಿ ಕುಟುಂಬದ ಆಸ್ತಿ ಅಂತಾ ಅಲ್ಲಾ ಎಂದರೆ ಸರಿಯಲ್ಲ.

2 ನೇ ವಾದಿಯ ಮಗಳು 3 ನೇ ಪ್ರತಿವಾದಿಯ ಹೆಂಡತಿ ಇರುತ್ತಾಳೆ ಎಂದರೆ ಸರಿ. ಹೀಗಾಗಿ ನಾವು ಸದರಿ ಈರವ್ವ ಮತ್ತು 3 ನೇ ಪ್ರತಿವಾದಿ ಅಶೋಕ ರವರ ಮಾತು ಕೇಳಿ ಇದೊಂದು ಖೊಟ್ಟಿ ದಾವೆ ಹಾಕಿದ್ದೇವೆ ಎಂದರೆ ಸರಿಯಲ್ಲ. ನಾನು ಅವರ ಮಾತು ಕೇಳಿಕೊಂಡು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟಿ ಸವಾಲುಃ 3 ನೇ ಪ್ರತಿವಾದಿ ಪರ ವಕೀಲರು ಪಾಟಿ ಸವಾಲಿಗೆ ಕಾಲಾವಕಾಶ ಕೊರಿದ್ದರಿಂದ ಕಾಲಾವಕಾಶ ನೀಡಿ ಮೂಂದುಾಡಲಾಯಿತು.

O.S. NO. 80/2019
PW - 1.
Dated 07-02-2025

(ಸಾಕ್ಷಿ ವಿಚಾರಣೆಯನ್ನು ನೆರವೇರಿಸಿದ್ದು , ಸಾಕ್ಷಿ ಹೇಳಿದ ಹೇಳಿಕೆಯನ್ನು ಬೆರಳಚ್ಚುಗಾರರಿಗೆ ಉಕ್ತ ಲೇಖನ ನೀಡಿ , ಅದನ್ನು ಗಣಕಿಕೃತಗೊಳಿಸಿದ ಮೇರೆಗೆ ದಾಖಲಿಸಲಾಯಿತು ).

ಓ ಹೇ ಕೇ ಸರಿ ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು
ಬೈಲಹೊಂಗಲ.